		2. ಇಷ್ಟಾರ್ಥ ಸಿದ್ಧಿ ಗಣಪತಿ ದೇವಸ್ಥಾನ ಜ್ಯೂಬಲಿ ರಸ್ತೆ
1. ಅರ್ಚಕರು	1	ಭತ್ಯೆ ಮತ್ತು ಅನುದಾನವಲ್ಲಿನ ಕ್ರಮಾಂಕ 2ರಲ್ಲಿವೆ.
2. ಪರಿಚಾರಕರು	1	125.00
3. ಕಾವಲುಗಾರ	1	100.00
4. ತೋಟಗಾರಿಕೆ	1	100.00

ರಾಜ್ಯದ ತಹಶೀಲ್ದಾರರಿಗೆ ಸರ್ಕಾರಿ ನಿವಾಸ.

1047 (1858): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಎಷ್ಟು ತಾಲ್ಲೂಕುಗಳನ್ನು ಹೊಂದಿದೆ;

ಆ. ತಾಲ್ಲೂಕು ತಹಶೀಲ್ದಾರರಿಗೆ ಸರ್ಕಾರಿ ನಿವಾಸ ಒದಗಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;

ಇ. ತಾಲ್ಲೂಕಿನ ತಹಶೀಲ್ದಾರರು ತಾಲ್ಲೂಕಿಗೆ ವರ್ಗವಾಗಿ ಬಂದ ಮೇಲೆ ನಿವಾಸ ಇಲ್ಲದೆ ತೊಂದರೆಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):-

ಅ. 175.

ಆ. ರಾಜ್ಯದ ಕೆಲವು ತಾಲ್ಲೂಕು ತಹಶೀಲ್ದಾರರುಗಳಿಗೆ ಪದಾಂಕಿತ ನಿವಾಸ ಕಟ್ಟಡಗಳಿದ್ದು ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಇತರೆ ಇಲಾಖೆಯ ಕಟ್ಟಡಗಳನ್ನು ಒದಗಿಸಲಾಗಿದೆ. ಪದಾಂಕಿತ ನಿವಾಸ ಕಟ್ಟಡಗಳಿಲ್ಲದ ತಾಲ್ಲೂಕು ತಹಶೀಲ್ದಾರರುಗಳಿಗೆ ಮತ್ತು ಕಂದಾಯ ಇಲಾಖೆಯ ಇತರೆ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಒದಗಿಸುವ ಉದ್ದೇಶದಿಂದ ಪೋಲೀಸ್ ಇಲಾಖೆಯಲ್ಲಿನ ಹೌಸಿಂಗ್ ಕಾರ್ಪೊರೇಷನ್ ಮಾದರಿಯಲ್ಲಿ ಕಂದಾಯ ಇಲಾಖೆಯಲ್ಲೂ ಹೌಸಿಂಗ್ ಕಾರ್ಪೊರೇಷನ್ ರಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಇ. ಇಲ್ಲ.

ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವಲ್ಲಿ ವಿಳಂಬ.

1048 (1857): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಧಾರವಾಡದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಕೃಷಿ ವಿಶ್ವವಿದ್ಯಾಲಯಕ್ಕೆ ಪಂಡಿತ ಜವಾಹರಲಾಲ್ ಕೃಷಿ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲು ತಡವಾಗುತ್ತಿರುವುದಕ್ಕೆ ಕಾರಣವೇನು;

ಆ. ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಪ್ರದೇಶದ ಕೃಷಿ ಸಮಾಜಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗದೇ ಇರುವದು ಸರ್ಕಾರದವರ ಗಮನಕ್ಕೆ ಬಂದಿದೆಯೇ;